ದೂರವಾಣಿ: 22341691

# ಕರ್ನಾಟಕ ಸರ್ಕಾರ
## ವಿದ್ಯುತ್ ಪರಿವೀಕ್ಷಣಾಲಯ

ಸಂಖ್ಯೆ ಮುವಿಪ/738 ಎಂಎಲ್‌ಎಸ್/ 3459 /10-11

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ
ನಂ. 32/1-2, ಕ್ರೆಸೆಂಟ್ ಟವರ್ಸ್,
2ನೇ ಮಹಡಿ, ಕ್ರೆಸೆಂಟ್ ರಸ್ತೆ, ಬೆಂಗಳೂರು -1.
ದಿನಾಂಕ: 12/5/11

ಗೆ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಇಂಧನ ಇಲಾಖೆ,
ವಿಕಾಸಸೌಧ,
ಬೆಂಗಳೂರು.

ಮಾನ್ಯರೆ,

ವಿಷಯ: 2010-11 ನೇ ಸಾಲಿನ ವಾರ್ಷಿಕ ವರದಿ ಒದಗಿಸುವ ಬಗ್ಗೆ.
ಉಲ್ಲೇಖ:1) ಅ.ಸ. ಪತ್ರ ಸಂಖ್ಯೆ: ಇಎನ್ 11 ಪಿಟಿಸಿ 2011 ದಿನಾಂಕ: 15.2.2011.
2) ಸಂ: ಮುವಿಪ/738 ಎಂಎಲ್‌ಎಸ್/37594/10-11 ದಿ:08/03/2011
3) ಅ.ಸ. ಪತ್ರ ಸಂಖ್ಯೆ: ಇಎನ್ 11 ಪಿಟಿಸಿ 2011 ದಿನಾಂಕ: 26/4/2011
ಸ್ವೀಕೃತಿ 3/5/2011.

------

ಮೇಲ್ಕಂಡ ವಿಷಯದನ್ವಯ, ಈ ಇಲಾಖೆಯ 2010-11 (ಜನವರಿ-11 ಅಂತ್ಯದ ವರೆಗೆ) ನೇ ಸಾಲಿನ ವಾರ್ಷಿಕ ವರದಿಯನ್ನು ಈಗಾಗಲೆ ಉಲ್ಲೇಖ(2)ರಲ್ಲಿ ಸಲ್ಲಿಸಲಾಗಿರುತ್ತದೆ. ಉಲ್ಲೇಖ(3)ರಲ್ಲಿ ತಿಳಿಸಿರುವಂತೆ ಈ ಇಲಾಖೆಯ 2010-11 (ಮಾರ್ಚಿ-2011 ಅಂತ್ಯದವರೆಗೆ ಇಂಧಿಕರಿಸಿ) ನೇ ಸಾಲಿನ ವಾರ್ಷಿಕ ವರದಿಯನ್ನು ಕನ್ನಡ ಮತ್ತು ಆಂಗ್ಲ ಬಾಷೆಯಲ್ಲಿ ಸಿದ್ಧಪಡಿಸಿ ಸಾಫ್ಟ್ ಮತ್ತು ಹಾರ್ಡ್ ಪ್ರತಿಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಈ ಮೂಲಕ ಮತ್ತೊಮ್ಮೆ ಸಲ್ಲಿಸುತ್ತಿದ್ದೇನೆ.

ತಮ್ಮ ನಂಬುಗೆಯ,

12/5/11

ಮುಖ್ಯ ವಿದ್ಯುತ್ ಪರಿವೀಕ್ಷಕರು.

10/5 AEO 10/5 10/5

D:\KNN\TECH\DEI M.doc

GOVERNMENT OF KARNATAKA

# ವಿದ್ಯುತ್ ಪರಿವೀಕ್ಷಣಾ ಇಲಾಖೆ

## 2010–11ನೇ ಸಾಲಿನ ವಾರ್ಷಿಕ ವರದಿ

ಮುಖ್ಯ ವಿದ್ಯುತ್ ಪರಿವೀಕ್ಷಕರ ಕಚೇರಿ, ಸಂಖ್ಯೆ: 32/1–2, ಕ್ರೆಸೆಂಟ್ ಟವರ್ಸ್, 2ನೇ ಮಹಡಿ, ಕ್ರೆಸೆಂಟ್ ರಸ್ತೆ, ಬೆಂಗಳೂರು–560001

## ವಿದ್ಯುತ್ ಪರಿವೀಕ್ಷಣಾಲಯ
## ಕಾರ್ಯವ್ಯಾಪ್ತಿ, ಉದ್ದೇಶಗಳು ಮತ್ತು ಆಡಳಿತ ವ್ಯವಸ್ಥೆ.

ವಿದ್ಯುಚ್ಛಕ್ತಿ ಕಾಯಿದೆ 1910ರಲ್ಲಿನ ಅವಕಾಶದಂತೆ ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯು ರಾಜ್ಯದ ಒಂದು ಸಂವಿಧಾನಕ ಕ್ಷೇತ್ರಿಯ ಇಲಾಖೆಯಾಗಿ 1957ನೇ ಇಸವಿ ಅಕ್ಟೋಬರ್ ತಿಂಗಳ ಒಂದರಂದು ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956ರ ರಚನೆಯ ನಂತರ ಕಾರ್ಯರೂಪಕ್ಕೆ ಬಂದಿರುತ್ತದೆ. ಮುಖ್ಯ ವಿದ್ಯುತ್ ಪರಿವೀಕ್ಷಕರು ಇಲಾಖೆಯ ಮುಖ್ಯಸ್ಥರಾಗಿದ್ದು, ಇಲಾಖೆಯು ಕರ್ನಾಟಕ ಸರ್ಕಾರದ ಇಂಧನ ಸಚಿವಾಲಯದ ಆಡಳತ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ.

ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿದ್ದು ಜೊತೆಯಲ್ಲಿ, ಸರ್ಕಾರದ ಪದನಿಮಿತ್ತ ಅಪರ ಕಾರ್ಯದರ್ಶಿಗಳು (ಪರವಾನಗಿ) ಇಂಧನ ಇಲಾಖೆ, ಪರವಾನಗಿ ಸಲಹಾ ಮತ್ತು ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಸಿನಿಮಾ ಆಪರೇಟರ್ ಪರೀಕ್ಷಾ ಮಂಡಳಿಯ ಅಧ್ಯಕ್ಷರು, ಲಿಫ್ಟ್ ಮತ್ತು ಎಲಿವೇಟರ್‌ಗಳ ಐ.ಎಸ್.ಎಸ್. ಮಂಡಳಿಯ ವಿಶೇಷ ಸಮಿತಿಯ ಸದಸ್ಯರು, ರಾಜ್ಯ ಲಿಫ್ಟ್‌ಗಳ ಪರಿವೀಕ್ಷಕರು ಹಾಗೂ ಸರ್ಕಾರಕ್ಕೆ ವಿದ್ಯುಚ್ಛಕ್ತಿಯ ವಿಷಯದ ಬಗ್ಗೆ ಸಲಹೆಗಾರರು ಆಗಿರುತ್ತಾರೆ.

**ಇಲಾಖಾ ಧ್ಯೇಯೋದ್ದೇಶಗಳು :**

ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಭಾರತೀಯ ವಿದ್ಯುಚ್ಛಕ್ತಿ ನಿಯಮ 1956ರಂತೆ, ಸುರಕ್ಷತಾ ಕೋಡ್ ಮತ್ತು ಸ್ಟಾಂಡರ್ಡ್‌ಗಳಿಗೆ ಅನುಗುಣವಾಗಿರುವಂತೆ ಖಚಿತಪಡಿಸಿ ಕೊಳ್ಳುವುದು ಈ ಇಲಾಖೆಯ ಮುಖ್ಯ ಗುರಿಯಾಗಿರುತ್ತದೆ. ಮಾನವ, ಪ್ರಾಣಿ ಜೀವಕ್ಕೆ ಮತ್ತು ಆಸ್ತಿ ಪಾಸ್ತಿಗೆ ಹಾನಿಯಾಗದಂತೆ ವಿದ್ಯುತ್ ಸ್ಥಾಪನೆಗಳು ಸುರಕ್ಷತೆಯಾಗಿ ಇರುವುದನ್ನು ಖಚಿತಪಡಿಸಿಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ವಿದ್ಯುಚ್ಛಕ್ತಿಯ ಉತ್ಪಾದನೆ, ಪ್ರಸರಣಾ, ವಿತರಣೆ ಮತ್ತು ಬಳಕೆಯ ರಂಗಗಳಲ್ಲಿ ಸುರಕ್ಷತಾ ಕ್ರಮಗಳನ್ನು ಅಳವಡಿಸಿರುವುದನ್ನು ಖಚಿತಪಡಿಸಿಕೊಳ್ಳುವುದನ್ನು ಈ ಇಲಾಖೆಗೆ ವಹಿಸಲಾಗಿರುತ್ತದೆ. ಭಾರತೀಯ ವಿದ್ಯುಚ್ಛಕ್ತಿ ಕಾನೂನು 1956, ವಿದ್ಯುಚ್ಛಕ್ತಿ ಕಾಯಿದೆ 2003, ಕರ್ನಾಟಕ ಲಿಫ್ಟ್ ಕಾಯಿದೆ 1974 ಮತ್ತು ಲಿಫ್ಟ್ ನಿಯಮ 1976, ಕರ್ನಾಟಕ ಸಿನಿಮಾಟೋಗ್ರಫಿ ಕಾಯಿದೆ 1964 ಮತ್ತು ನಿಯಮಗಳು 1971, ಕರ್ನಾಟಕ ವಿಡಿಯೋ ಕ್ಯಾಸೆಟ್ ರೆಕಾರ್ಡರ್ ನಿಯಮಗಳು 1984ರಲ್ಲಿರುವಂತೆ ಪರವಾನಿಗೆ ಮತ್ತು ಪರ್ಮಿಟ್‌ಗಳನ್ನು ನೀಡಲಾಗಿರುತ್ತದೆ ಮತ್ತು ಕರ್ನಾಟಕ (ವಿದ್ಯುತ್ ಗುತ್ತಿಗೆದಾರರಿಗೆ ಪರವಾನಗಿ ನೀಡುವ ಮತ್ತು ವಿದ್ಯುತ್ ಮೇಲ್ವಿಚಾರಕರ (ಔದ್ಯಮಿಕ / ಗಣಿ) ಮತ್ತು ವಿದ್ಯುತ್ ತಂತಿ ಕೆಲಸಗಾರರಿಗೆ ಅರ್ಹತಾ ಪತ್ರ ರಹದಾರಿ ನೀಡುವಿಕೆ) ನಿಯಮಗಳು 1976ರಲ್ಲಿರುವ ನಿಯಮಗಳ ಪ್ರಕಾರ ಸ್ಥಾವರಗಳನ್ನು ಅನುಷ್ಠಾನಕ್ಕೆ ತಂದು ಸದರಿ ಕೆಲಸವನ್ನು ಸಾಧಿಸಲಾಗುತ್ತದೆ. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಣ ತೆರಿಗೆ) ಆಕ್ಟ್ ಮತ್ತು 1959ರ ಪ್ರಕಾರ ಸರಬರಾಜುದಾರರಿಂದ /ಕ್ಯಾಪ್ಟಿವ್ ಜನರೇಷನ್ ಸೇರಿದಂತೆ ಇತರರಿಂದ ಸ್ವೀಕೃತಗೊಂಡ ತೆರಿಗೆ ಪಾವತಿ ವಿವರಗಳನ್ನು ಪರಿಶೀಲಿಸುವುದು ಈ ಇಲಾಖೆಯ ಮತ್ತೊಂದು ಕೆಲಸವಾಗಿರುತ್ತದೆ.

**ಇಲಾಖಾ ಕರ್ತವ್ಯಗಳು** :

ವಿವಿಧ ಕೇಂದ್ರ ಹಾಗೂ ರಾಜ್ಯಗಳ ಕಾಯಿದೆ ಮತ್ತು ನಿಯಮಗಳ ಪ್ರಕಾರ ಇಲಾಖೆಯು ಈ ಕೆಳಕಂಡ ಕರ್ತವ್ಯಗಳನ್ನು ನಿರ್ವಹಿಸುತ್ತದೆ.

1) ಕ.ವಿ.ಪ್ರ.ನಿ.ನಿ, ಸ್ವತಂತ್ರ ವಿದ್ಯುತ್ ಉತ್ಪಾದಕರ (ಹೈಡ್ರೋ, ಥರ್ಮಲ್ ವಿಂಡ್, ಡೀಸೆಲ್, ಕೋ-ಜನರೇಷನ್, ಬಯೋ-ಮಾಸ್, ಇತರೆ) ಸರಬರಾಜುದಾರರ / ಲೈಸೆನ್ಸ್‌ದಾರರ ವಿತರಣಾ ಕೇಂದ್ರ ಹಾಗೂ ಮಾರ್ಗ, ವಿದ್ಯುತ್ ಸರಬರಾಜುದಾರ ಕಂಪನಿಗಳ ವಿತರಣಾ ಕೇಂದ್ರ ಹಾಗೂ ಮಾರ್ಗ, ಇಹೆಚ್‌ಟಿ, ಹೆಚ್‌ಟಿ, ವಿದ್ಯುಜ್ಜನಕ (ಸಿ.ಜಿ./ಡಿ.ಜಿ/ಟಿ.ಜಿ), 15 ಮೀಟರ್ ಮತ್ತು ಅದಕ್ಕಿಂತ ಹೆಚ್ಚಿನ ಎತ್ತರದ ಬಹುಮಹಡಿ ಕಟ್ಟಡ, ಲಿಫ್ಟ್ ಮತ್ತು ಎಸ್ಕಲೇಟರ್, ಮತ್ತು ಸಿನಿಮಾ ವಿದ್ಯುತ್ ಸ್ಥಾವರಗಳ ರೇಖಾ ಚಿತ್ರಗಳ ಪರಿಶೀಲನೆ ಹಾಗೂ ಅನುಮೋದನೆ ಕೊಡುವುದು.
2) ಮೇಲ್ಕಂಡ ವಿದ್ಯುತ್ ಸ್ಥಾವರಗಳ ಹಾಗೂ ಕ್ಷ-ಕಿರಣ ನಿಯಾನ್‌ಸೈನ್ ಮತ್ತು ತಾತ್ಕಾಲಿಕ ವಿದ್ಯುತ್ ಸ್ಥಾವರಗಳ ಪ್ರಾಥಮಿಕ ಪರಿವೀಕ್ಷಣೆ ಮಾಡಿ ಸುರಕ್ಷತಾ ನಿಯಮಗಳಿಗೆ ಒಳಪಟ್ಟಿದ್ದಲ್ಲಿ

ಚಾಲನೆಗೊಳಿಸಲು ಅನುಮೋದನೆ ಕೊಡುವುದು ಹಾಗೂ ಕಾಲಕಾಲಕ್ಕೆ ಮೇಲ್ಕಂಡ ವಿದ್ಯುತ್ ಸ್ಥಾವರಗಳ ಮತ್ತು ಮಧ್ಯಮ ಒತ್ತಡ ವಿದ್ಯುತ್ ಸ್ಥಾವರಗಳ ನಿಯತಕಾಲಿಕ ಪರಿವೀಕ್ಷಣೆ ನಡೆಸುವುದು.

3) ವಿದ್ಯುತ್ ಅಪಘಾತಗಳ ತನಿಖೆ ನಡೆಸಿ, ಅಪಘಾತ ತಡೆಯುವ ಸಲಹೆಗಳೊಂದಿಗೆ ಸರ್ಕಾರಕ್ಕೆ ವರದಿ ಮಾಡುವುದು. ವಿದ್ಯುತ್ ಸರಬರಾಜುದಾರರು ಮತ್ತು ಲೈಸೆನ್ಸಿಗಳೊಂದಿಗೆ ವಿದ್ಯುತ್ ಅಪಘಾತಗಳನ್ನು ತಡೆಯುವ ಬಗ್ಗೆ ವ್ಯವಹರಿಸುವುದು.

4) ವಿದ್ಯುತ್ ಸರಬರಾಜುದಾರರು / ಲೈಸೆನ್ಸಿಗಳಿಂದ ವಸೂಲಾದ ತೆರಿಗೆ ಮತ್ತು ಸ್ವವಿದ್ಯುತ್ ಮೇಲೆ ವಸೂಲಾದ ವಿದ್ಯುತ್ ತೆರಿಗೆಗಳ ಲೆಕ್ಕಾಚಾರ ಮತ್ತು ವಸೂಲಿ ಬಗ್ಗೆ ಕ್ರಮ ಕೈಗೊಳ್ಳುವುದು.

5) ವಿದ್ಯುತ್ ಗುತ್ತಿಗೆದಾರರಿಗೆ, ಸೂಪರ್ ವೈಸರ್‌ಗಳಿಗೆ, ವೈರ್‌ಮನ್‌ಗಳಿಗೆ ಮತ್ತು ವಿಶೇಷ ವೈರ್‌ಮನ್ ಪರ್ಮಿಟ್‌ಗಳಿಗೆ ಹೊಸ ಲೈಸೆನ್ಸ ನೀಡುವುದು ಮತ್ತು ನವೀಕರಣಗೊಳಿಸುವುದು. ಔದ್ಯಮಿಕ ಮತ್ತು ಗಣಿ ಪರ್ಯವೇಕ್ಷಕರ ಮತ್ತು ತಂತಿಕರ್ಮಿಗಳ ಪರೀಕ್ಷೆ ನಡೆಸುವುದು.

6) ಸಿನಿಮಾ ಆಪರೇಟರ್‌ಗಳಿಗೆ ಪರ್ಮಿಟ್ ನೀಡಲು ಪರೀಕ್ಷೆ ನಡೆಸುವುದು ಮತ್ತು ಪರ್ಮಿಟ್ ನೀಡುವುದು.

**ಇಲಾಖೆಯ ಬಗ್ಗೆ:**

ಮುಖ್ಯ ವಿದ್ಯುತ್ ಪರಿವೀಕ್ಷಕರು, ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಅದರ ಮುಖ್ಯ ಕಚೇರಿಯು 2ನೇ ಮಹಡಿ, ಕ್ರೆಸೆಂಟ್ ಟವರ್ಸ್, ಕ್ರೆಸೆಂಟ್ ರಸ್ತೆ, ಬೆಂಗಳೂರು 560 002 ರಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

ಆಡಳಿತ ಮತ್ತು ಕಾಯಿದೆ ಹಾಗೂ ನಿಯಮಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಮುಖ್ಯ ವಿದ್ಯುತ್ ಪರಿವೀಕ್ಷಕರಿಗೆ 7 ಜನ ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು, 21 ವಿದ್ಯುತ್ ಪರಿವೀಕ್ಷಕರು, 41 ಉಪ ವಿದ್ಯುತ್ ಪರಿವೀಕ್ಷಕರು, 72 ಸಹಾಯಕ ವಿದ್ಯುತ್ ಪರಿವೀಕ್ಷಕರು, ಒಬ್ಬರು ಲೆಕ್ಕಾಧಿಕಾರಿ, ಒಬ್ಬರು ವ್ಯವಸ್ಥಾಪಕರು, 12 ಅಧೀಕ್ಷಕರು ಮತ್ತು 134 ಇತರ ಸಿಬ್ಬಂದಿಗಳು ಸಹಕರಿಸುತ್ತಿರುತ್ತಾರೆ.

**ವಿದ್ಯುತ್ ಪರಿವೀಕ್ಷಣಾ ಇಲಾಖೆಗೆ ಮಂಜೂರಾದ ಕಾರ್ಯನಿರತ ಸಿಬ್ಬಂದಿ ಮತ್ತು ರಿಕ್ತ ಸ್ಥಾನಗಳ ವಿವರಗಳನ್ನು ಕೆಳಗೆ ನಮೂದಿಸಲಾಗಿದೆ.**

31-03-2011 ರ ಅಂತ್ಯಕ್ಕೆ

| ಕ್ರ. ಸಂ | ಹುದ್ದೆಯ ಹೆಸರು | ಮಂಜೂರಾದ ಒಟ್ಟು ಹುದ್ದೆಗಳು | | ಒಟ್ಟು ಹುದ್ದೆಗಳು | ಕಾರ್ಯ ನಿರ್ವಹಿಸುತ್ತಿರುವ ಹುದ್ದೆಗಳು | ರಿಕ್ತ ಸ್ಥಾನಗಳು |
|---|---|---|---|---|---|---|
| | | ಹಿಂದೆ ಮಂಜೂರಾಗಿದ್ದ ಹುದ್ದೆಗಳು | 2010-11 ರಲ್ಲಿ ಸೃಜನೆಗೊಂಡ ಹೆಚ್ಚುವರಿ ಹುದ್ದೆಗಳು | | | |
| 1 | ಮುಖ್ಯ ವಿದ್ಯುತ್ ಪರಿವೀಕ್ಷಕರು | 01 | | 01 | 01 | -- |
| 2 | ಉಪ ಮುಖ್ಯ ವಿದ್ಯುತ್ ಪರಿವೀಕ್ಷಕರು | 07 | | 07 | 07 | -- |
| 3 | ವಿದ್ಯುತ್ ಪರಿವೀಕ್ಷಕರು | 21 | | 21 | 21 | -- |
| 4 | ಉಪ ವಿದ್ಯುತ್ ಪರಿವೀಕ್ಷಕರು | 40 | | 40 | 29 | 11 |
| 5 | ಹಿರಿಯ ಲೆಕ್ಕಾದಿಕಾರಿ | | 01 | 01 | -- | 01 |
| 6 | ಲೆಕ್ಕಾಧಿಕಾರಿ | 01 | 02 | 03 | 01 | 02 |
| 7 | ಲೀಗಲ್ ಆಫೀಸರ್ | | 01 | 01 | -- | 01 |
| 8 | ಸಹಾಯಕ ವಿದ್ಯುತ್ ಪರಿವೀಕ್ಷಕರು | 72 | | 72 | 37 | 35 |
| 9 | ವ್ಯವಸ್ಥಾಪಕರು | 01 | 06 | 07 | 01 | 06 |
| 10 | ಅಧೀಕ್ಷಕರು | 12 | 07 | 19 | 12 | 07 |
| 11 | ಪ್ರಥಮ ದರ್ಜೆ ಸಹಾಯಕರು | 37 | 10 | 47 | 30 | 17 |
| 12 | ಶೀಘ್ರ ಲಿಪಿಗಾರರು | 06 | | 06 | 06 | -- |
| 13 | ದ್ವಿತೀಯ ದರ್ಜೆ ಸಹಾಯಕರು | 33 | 23 | 56 | 31 | 25 |
| 14 | ಬೆರಳಚ್ಚುಗಾರರು | 02 | | 02 | 02 | -- |

| | | | | | | |
|---|---|---|---|---|---|---|
| 15 | ಕಂಪ್ಯೂಟರ್ ಆಪರೇಟರ್ | | 14 | 14 | -- | 14 |
| 16 | ಹಿರಿಯ ವಾಹನ ಚಾಲಕರು | 02 | | 02 | 02 | -- |
| 17. | ವಾಹನ ಚಾಲಕರು | 08 | | 08 | 05 | 03 |
| 18. | ದಫೇದಾರರು | 02 | | 02 | 02 | --- |
| 19. | ಹೆಲ್ಪರುಗಳು | 13 | 11 | 24 | 11 | 13 |
| 20. | ಜವಾನರು | 29 | 10 | 39 | 22 | 17 |
| 21 | ಕಾವಲುಗಾರರು | 01 | | 01 | 01 | -- |
| 22. | ಧ್ವಿಪ್ರತಿ ಯಂತ್ರ ಚಾಲಕರು | 01 | | 01 | 01 | -- |
| ಒಟ್ಟು | | 289 | 85 | 374 | 222 | 152 |

**ಕಾರ್ಯನಿರ್ವಹಣೆ ಬಗ್ಗೆ ಸಂಕ್ಷಿಪ್ತ ವರದಿ:**

<u>ವಿದ್ಯುತ್ ಸ್ಥಾವರಗಳ ನೀಲಿ ನಕ್ಷೆಗಳ ಅನುಮೋದನೆಯ ಅಂಕಿ ಅಂಶಗಳು:</u>

ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956, ಕರ್ನಾಟಕ ಸಿನಿಮಾಟೊಗ್ರಫಿ ಕಾಯ್ದೆ 1964 ಮತ್ತು ನಿಯಮಗಳು 1971 ಹಾಗೂ ಕರ್ನಾಟಕ ಲಿಫ್ಟ್ ಕಾಯ್ದೆ 1974 ಮತ್ತು ನಿಯಮಗಳು 1976ರ ಅಡಿಯಲ್ಲಿ 2009-10 ನೇ ಸಾಲಿನಲ್ಲಿ (1-04-2010 ರಿಂದ 31-03-2011 ರವರೆಗೆ) ಇಲಾಖೆಯು ಅನುಮೋದಿಸಿದ ವಿವಿಧ ವಿದ್ಯುತ್ ಸ್ಥಾವರಗಳ ನೀಲಿನಕ್ಷೆಗಳ ಅಂಕಿ ಅಂಶಗಳ ಸಂಕ್ಷಿಪ್ತ ವಿವರಗಳು ಕೆಳಕಂಡಂತೆ ಇರುತ್ತವೆ.

| ಕ್ರಮ ಸಂಖ್ಯೆ | ಸ್ಥಾವರಗಳ ವಿವರ | ಸಂಖ್ಯೆ |
|---|---|---|
| 1 | ವಿತರಣಾ ಕೇಂದ್ರ / ಇಹೆಚ್‌ಟಿ/ಹೆಚ್‌ಟಿ/ ಪರಿವರ್ತಕಗಳು | 1627 |
| 2. | ಸಿಜಿ/ಡಿಜಿ/ಟಿ.ಜಿ. ಸೆಟ್ ಗಳು ಮತ್ತು ಉತ್ಪಾದನ ಕೇಂದ್ರಗಳು | 7613 |
| 3. | ಬಹುಅಂತಸ್ತಿನ ಕಟ್ಟಡಗಳ ವಿದ್ಯುತ್ ಸ್ಥಾವರಗಳು ಮತ್ತು . ಬಹುಅಂತಸ್ತಿನ ಕಟ್ಟಡಗಳಿಗೆ ಸಂಬಂದಿಸಿದ ಸ್ಥಾವರಗಳು | 1104 |
| 4. | ಸಿನಿಮಾ ಕಟ್ಟಡದ ವಿದ್ಯುತ್ ಸ್ಥಾವರಗಳ | 14 |
| 5 | ಲಿಫ್ಟ್ | 2956 |
| 6. | ಇತರೆ | 6183 |

ಭಾರತೀಯ ವಿದ್ಯುಚ್ಛಕ್ತಿ ನಿಯಮಗಳು 1956, ಕರ್ನಾಟಕ ಸಿನಿಮಾಟೊಗ್ರಫಿ ಕಾಯಿದೆ 1964 ಮತ್ತು ನಿಯಮಗಳು 1971 ಮತ್ತು ಕರ್ನಾಟಕ ಲಿಫ್ಟ್ ನಿಯಮಗಳ 1976ರ ಅಡಿಯಲ್ಲಿ ಕೈಗೊಂಡ ಪರಿವೀಕ್ಷಣೆಯ ವಿವರಗಳು.

ವಿದ್ಯುತ್ ಪರಿವೀಕ್ಷಣಾ ಇಲಾಖೆಯ ತಾಂತ್ರಿಕ ಸಿಬ್ಬಂಧಿಯವರು ಭಾರತೀಯ ವಿದ್ಯುಚಕ್ತಿ ನಿಯಮ 1956, ಕರ್ನಾಟಕ ಸಿನಿಮಾ ಕಾಯಿದೆ 1964 ಮತ್ತು ನಿಯಮಗಳು 1971 ಮತ್ತು ಕರ್ನಾಟಕ ಲಿಫ್ಟ್ ನಿಯಮಗಳು 1976ರ ಅಡಿಯಲ್ಲಿ 2009-10 ನೇ ಸಾಲಿನಲ್ಲಿ (1-4-2010 ರಿಂದ 31.03.2011 ) ಕೈಗೊಂಡ ಪ್ರಾಥಮಿಕ ಮತ್ತು ನಿಯತಕಾಲಿಕ ಪರಿವೀಕ್ಷಣೆಯ ವಿವರಗಳು ಕೆಳಕಂಡಂತೆ ಇರುತ್ತದೆ.

ದಿನಾಂಕ 01.04.2010 ರಿಂದ 31.03.2011 ರ ವರೆಗೆ ಪರಿವೀಕ್ಷಿಸಿದ ಸ್ಥಾವರಗಳ ಅಂಕಿ ಅಂಶಗಳು ಮತ್ತು 31.03.2011 ರ ಅಂತ್ಯಕ್ಕೆ ಒಟ್ಟು ಸ್ಥಾವರಗಳ ಅಂಕಿ ಅಂಶಗಳು:

| ವಿವರಗಳು | | 31/03/2010 ರಲ್ಲಿದ್ದಂತೆ ಸ್ಥಾವರಗಳು. | 01-04-2010 ರಿಂದ 31-03-2011 ರವರೆಗೆ ನೆಡೆಸಿದ ನಿಯತಕಾಲಿಕ ಪರಿವೀಕ್ಷಣೆ | 01-04-2010 ರಿಂದ 31-03-2011 ರವರೆಗೆ ನೆಡೆಸಿದ ಪ್ರಥಮ ಪರಿವೀಕ್ಷಣೆ | 31-03-2011 ರ ಅಂತ್ಯಕ್ಕೆ ಸ್ಥಾವರಗಳು |
|---|---|---|---|---|---|
| ವಿದ್ಯುತ್ ಉತ್ಪಾದನಾ ಕೇಂದ್ರಗಳು | ೧. ಸರ್ಕಾರಿ: | 28 | 15 | -- | 28 |
| | ೨. ಖಾಸಗಿ: | 1938 | 1794 | 173 | 2111 |
| ವಿದ್ಯುತ್ ಪ್ರಸರಣಾ ಮಾರ್ಗಗಳು ಕಿ.ಮಿ.ಗಳಲ್ಲಿ | ಇ ಹೆಚ್‌ವಿ | 28483.47 | 1922.63 | 654.257 | 29137.727 |
| | ಹೆಚ್ ವಿ | 208992.962 | 23363.53 | 6025.914 | 215018.87 |
| | ಎಂ ವಿ | 435031.771 | 38443.94 | 2554.532 | 437586.30 |
| ವಿದ್ಯುತ್ ವಿತರಣಾ ಕೇಂದ್ರಗಳು (ಎಂಯುಎಸ್‌ಎಸ್) | | 1250 | 254 | 87 | 1337 |
| ಪರಿವರ್ತಕ ಕೇಂದ್ರಗಳು (ಕ.ವಿ.ಪ್ರ.ನಿ.ನಿ) | | 331648 | 31479 | 14221 | 345869 |
| ಹೆಚ್ ಟಿ ಸ್ಥಾವರಗಳು | | 11237 | 10343 | 1555 | 12792 |
| ಬಹು ಮಹಡಿ ಕಟ್ಟಡ ಸ್ಥಾವರಗಳು | | 4266 | 3770 | 1099 | 5365 |
| ಸಿನೆಮಾ | ಖಾಯಂ | 635 | 234 | 8 | 643 |
| | ಅರೆ ಖಾಯಂ | 176 | 87 | 7 | 183 |
| | ಸಂಚಾರಿ | 195 | 166 | 1 | 196 |
| ವಿಡಿಯೋ | | 121 | 112 | 0 | 121 |
| ಕ್ಷ- ಕಿರಣಗಳು | | 731 | 705 | 17 | 748 |
| ನಿಯಾನ್ ಚಿನ್ಹೆಗಳು | | 90 | 90 | 3 | 93 |
| ಲಿಫ್ಟ್ ಗಳು | | 16979 | 9826 | 2547 | 19227 |
| ಎಂ ವಿ ಸ್ಥಾವರಗಳು | | 250539 | 28292.2 | 01 | 250540 |
| ಡಿಜಿ ಸೆಟ್ | | 35183 | 32420 | 7398 | 41954 |

**ವಿದ್ಯುತ್ ಅಪಘಾತಗಳು:**

2010-11 ಒಟ್ಟು 1609 ವಿದ್ಯುತ್ ಅಪಘಾತಗಳು ವರದಿಯಾಗಿದ್ದು, ಅವುಗಳಲ್ಲಿ 434 ಸಂಖ್ಯೆಯು ಮಾನವರಿಗೆ ಮರಣಾಂತಿಕ ಅಪಘಾತಗಳಾಗಿದ್ದು, 239 ಸಂಖ್ಯೆಯು ಮಾನವರಿಗೆ ಅಮರಣಾಂತಿಕ ಅಪಘಾತಗಳಾಗಿದ್ದು, 490 ಸಂಖ್ಯೆಯು ಪ್ರಾಣಿಗಳಿಗೆ ಮರಣಾಂತಿಕ ಅಪಘಾತಗಳಾಗಿದ್ದು, ಮತ್ತು 446 ಸಂಖ್ಯೆಯ ಬೆಂಕಿ ಅಪಘಾತಗಳಾಗಿರುತ್ತವೆ.

ಎಲ್ಲಾ ವಿದ್ಯುತ್ ಅಪಘಾತಗಳನ್ನು ಭಾರತೀಯ ವಿದ್ಯುಚ್ಛಕ್ತಿ ಕಾಯಿದೆ 2003ರ ಸೆಕ್ಷನ್ 161ರ ಅನ್ವಯ ಮತ್ತು ಭಾರತೀಯ ವಿದ್ಯುಚ್ಛಕ್ತಿ ನಿಯಮ 1956ರನ್ವಯ ತನಿಖೆ ನಡೆಸಿದ್ದು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿರುತ್ತದೆ ಮತ್ತು ಮುಂದೆ ಅಪಘಾತಗಳು ಸಂಭವಿಸದಂತೆ ತಡೆಯಲು ಪರಿಹಾರಗಳನ್ನು ಸಹ ಸಲ್ಲಿಸಲಾಗಿರುತ್ತದೆ.

<u>ವಿದ್ಯುತ್ ಅಪಘಾತಗಳ ಕಾರಣಗಳು</u>: 2010-11

| ಸಂಖ್ಯೆ | ಕಾರಣಗಳು | ಮಾನವರಿಗೆ | | | | ಪ್ರಾಣಿಗಳ ಮರಣಾಂತಿಕ | ಆನೆಗಳ ಮರಣಾಂತಿಕ | ಬೆಂಕಿ ಅಪಘಾತ | ಒಟ್ಟು |
|---|---|---|---|---|---|---|---|---|---|
| | | ಮರಣಾಂತಿಕ | | ಅಮರಣಾಂತಿಕ | | | | | |
| | | ಇಲಾಖೇತರ | ಇಲಾಖೆ | ಇಲಾಖೇತರ | ಇಲಾಖೆ | | | | |
| 1. | ವಿದ್ಯುತ್ ವಾಹಕಗಳು ತುಂಡಾಗುವುದರಿಂದ | 69 | 1 | 31 | 1 | 227 | 1 | 38 | **368** |
| 2. | ಮರದ ಕೊಂಬೆಗಳು ಬೀಳುವುದರಿಂದ | 7 | 0 | 5 | 0 | 10 | 2 | 8 | **32** |
| 3. | ವಿದ್ಯುತ್ ಕಂಬಗಳು ಮುರಿಯುವುದರಿಂದ | 3 | 0 | 1 | 0 | 15 | 0 | 1 | **20** |
| 4. | ವಿದ್ಯುತ್ ಪೂರಿತ ವಾಹಕಗಳ / ಉಪಕರಣಗಳ ಆಕಸ್ಮಿಕ ಸಂಪರ್ಕದಿಂದ | 147 | 16 | 70 | 64 | 16 | 0 | 30 | **343** |
| 5. | ಲೋಹದ ಭಾಗಗಳು ಚೇತನಗೊಳ್ಳುವುದರಿಂದ | 8 | 2 | 5 | 2 | 22 | 1 | 0 | **40** |
| 6. | ಸೋರಿಕೆ ವಿದ್ಯುತ್ ನಿಂದ/ ಗೈ ವೈರ್/ಭೂಸಂಪರ್ಕ ತಂತಿ ಚೇತನಗೊಳ್ಳುವುದರಿಂದ | 33 | 0 | 4 | 7 | 153 | 0 | 0 | **197** |
| 7. | ವಿದ್ಯುತ್ ಮಾಪಕ/ಆಫ್ ಪೋಲ್ ವಿದ್ಯುತ್ ನಿಂದ ಚೇತನಗೊಳ್ಳುವುದರಿಂದ | 3 | 0 | 1 | 1 | 6 | 0 | 0 | **11** |
| 8. | ಗ್ರಾಹಕರ ಸ್ಥಾವರಗಳಲ್ಲಿರುವ ವಿದ್ಯುತ್ ವೈಯರಿಂಗ್ ಮತ್ತು ಉಪಕರಣಗಳ ನ್ಯೂನತೆಯಿಂದ | 33 | 0 | 1 | 0 | 6 | 0 | 25 | **65** |
| 9. | ಅನಧಿಕೃವಾಗಿ ತಂತಿ ಬೇಲಿಗಳನ್ನು ಚೇತನಗೊಳಿಸುವುದರಿಂದ | 17 | 0 | 0 | 0 | 2 | 5 | 0 | **24** |
| 10. | ಬೇರೆ ಯಾವುದಾದರೂ ಕಾರಣಗಳಿಂದ | 89 | 6 | 16 | 30 | 22 | 2 | 344 | **509** |
| | ಒಟ್ಟು | **409** | **25** | **134** | **105** | **479** | **11** | **446** | **1609** |

ಪರವಾನಗಿ ಸಲಹಾ ಹಾಗೂ ಪರೀಕ್ಷಾ ಮಂಡಳಿ.

ವಿದ್ಯುತ್ ಗುತ್ತಿಗೆದಾರ ಪರವಾನಗಿ ಹಾಗೂ ಪರೀಕ್ಷಾ ಮಂಡಳಿ ತಿಂಗಳಿಗೊಮ್ಮೆ ಸಭೆ ಸೇರಿ, ಹಿಂದಿನ ತಿಂಗಳಿನಲ್ಲಿ ಸ್ವೀಕೃತಗೊಂಡ ಪರವಾನಗಿ ಅರ್ಜಿಗಳನ್ನು ಪರಾಮರ್ಶಿಸಿ, ಹೊಸ ಹಾಗೂ ನವೀಕೃತ ಪರವಾನಗಿಗಳನ್ನು ನೀಡಲಾಗುತ್ತಿದೆ.

2010–11 ರ ಅವಧಿಯಲ್ಲಿ ನೀಡಲಾದ ಪರವಾನಗಿ ಮತ್ತು ರಹದಾರಿಗಳ ಅಂಕಿ ಅಂಶಗಳನ್ನು 01-04-2010ರಿಂದ 31-03-2011 ರ ಅಂತ್ಯದಲ್ಲಿದ್ದಂತೆ ಈ ಮಾಹಿತಿ ವಿವರಿಸಲಾಗಿದೆ.

| ಕ್ರಮ ಸಂಖ್ಯೆ | ವಿವರ | 31-03-2010 ಕ್ಕೆ ಅಂತ್ಯಗೊಂಡಂತೆ ವಿತರಿಸಲಾದ ಪರವಾನಗಿ ಮತ್ತು ಪರ್ಯವೇಕ್ಷಕ ರಹಾರಿಗಳ ಒಟ್ಟು ಸಂಖ್ಯೆ: | 2010-11 ರಲ್ಲಿ ವಿತರಿಸಲಾದ ಪರವಾನಗಿ ಮತ್ತು ರಹದಾರಿಗಳ ಸಂಖ್ಯೆ |
|---|---|---|---|
| 1. | ವಿದ್ಯುತ್ ಗುತ್ತಿಗೆದಾರರ ಪರವಾನಗಿ | | |
| | ವರ್ಗ – 1 | 24111 | 2898 |
| | ವರ್ಗ – 2 | 14287 | 330 |
| | ವರ್ಗ – 3 | 14 | -- |
| 2. | ವಿಶೇಷ ತಂತಿ ರಹದಾರಿಗಳು | 51 | 1 |
| 3. | ವಿದ್ಯುತ್ ಪರ್ಯವೇಕ್ಷಕರು(ಕೈಗಾರಿಕೆ) ರಹದಾರಿಗಳು | 27098 | 1395 |
| 4. | ವಿದ್ಯುತ್ ಪರ್ಯವೇಕ್ಷಕರು(ಗಣಿ) ರಹದಾರಿಗಳು | 682 | 5 |
| 5. | ತಂತಿ ರಹದಾರಿಗಳು | 42588 | 3269 |

**ವಿದ್ಯುತ್‌ಚ್ಛಕ್ತಿ ಬಳಕೆ ಮೇಲಿನ ತೆರಿಗೆ**

**ಕ.ವಿ.ಪ್ರ.ನಿ.ನಿಯಮಿತದ ಕಂಪನಿಗಳಿಂದ, ಐ.ಪಿ.ಪಿಗಳಿಂದ ಮತ್ತು ಮೆ. ಹುಕ್ಕೇರಿ ತಾಲ್ಲೋಕು ಕೋ ಆಪರೇಟಿವ್ ಸೊಸೈಟಿಯಿಂದ 2010–11 ನೇ ಸಾಲಿನಲ್ಲಿ ರವರೆಗೆ ವಸೂಲಾತಿ ಮಾಡಲಾದ ತೆರಿಗೆ ವಿವರಗಳು, ರೂ.ಗಳಲ್ಲಿ ರಾಜಸ್ವ ಕಂದಾಯ ಮತ್ತು ವೆಚ್ಚದ ವಿವರಣಾ ಪಟ್ಟಿ:**

| ಸಂಖ್ಯೆ. | ವಿವರಗಳು | ತೆರಿಗೆ ವಸೂಲಾತಿ ಕೋಟಿ ರೂ. ಗಳಲ್ಲಿ. 2010–11(ಡಿಸೆಂಬರ್–10 ಅಂತ್ಯದವರಗೆ) | Jan-11 | |
|---|---|---|---|---|
| 1 | ಕ.ವಿ.ಪ್ರ.ನಿ.ನಿಯಮಿತದ ಕಂಪನಿಗಳು | 291.226 | | |
| 2 | ಐ.ಪಿ.ಪಿಗಳು | 3.73 | | |
| 3 | ಮೆ. ಹುಕ್ಕೇರಿ ತಾಲ್ಲೋಕು ಕೋ ಆಪರೇಟಿವ್ ಸೊಸೈಟಿ | 0.57 | | |
| 4 | ಸ್ವ-ವಿದ್ಯುತ್ ಜನಕಗಳಿಂದ | 18.48 | | |
| 5 | ಕೆ.ಪಿ.ಸಿ.ಎಲ್ | 0.13 | | |
| | **ಒಟ್ಟು** | **314.14** | | |
| | | | | |

ರಾಜ್ಯದಲ್ಲಿರುವ ಎಲ್ಲಾ ವಿದ್ಯುತ್ ಸ್ಥಾವರಗಳು ಸುರಕ್ಷತೆಯಾಗಿರುವ ಉದ್ದೇಶದಿಂದ ಸದರಿ ಸ್ಥಾವರಗಳನ್ನು ಪ್ರಾಥಮಿಕವಾಗಿ ಮತ್ತು ನಿಯತಕಾಲಿಕವಾಗಿ ಪರಿವೀಕ್ಷಣೆ ಮಾಡಿ ಪರಿವೀಕ್ಷಣಾ ಶುಲ್ಕವನ್ನು ವಸೂಲಿ ಮಾಡಲಾಗುತ್ತಿರುತ್ತದೆ. ಬಳಕೆದಾರರು ಬಳಸುವ ವಿದ್ಯುತ್‌ನ ಬಿಲ್ ಮೊತ್ತದ ಮೇಲೆ ಶೇ. 5 ರಂತೆ ವಿದ್ಯುತ್ ತೆರಿಗೆಯನ್ನು ವಿಧಿಸಿ ಸರಬರಾಜುದಾರರ ಮುಖಾಂತರ ವಸೂಲಿ ಮಾಡಲಾಗುತ್ತಿದೆ. ಈ ರೀತಿ ವಸೂಲಾಗುವ ತೆರಿಗೆ ಸಂಬಂಧಪಟ್ಟ ನಮೂನೆಗಳನ್ನು ಮತ್ತು ಪುಸ್ತಕಗಳನ್ನು ಪರಿಶೀಲಿಸಿ ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ) ಕಾಯಿದೆ ಮತ್ತು ನಿಯಮಗಳು 1959ರ ಪ್ರಕಾರ ಇರುವುದೇ ಎಂಬುದನ್ನು ಗಮನಿಸಲಾಗುತ್ತದೆ.

**2010-11(ಡಿಸೆಂಬರ್-10) ರ ರಾಜಸ್ವ ಕಂದಾಯ ಕೆಳಕಂಡಂತೆ ಇರುತ್ತದೆ.**

| ಕ್ರಮ ಸಂಖ್ಯೆ | ವಿವರಗಳು | ಮೊತ್ತ ರೂ. ಗಳಲ್ಲಿ | | |
|---|---|---|---|---|
| | | (ಡಿಸೆಂಬರ್-2010 ಅಂತ್ಯದವರಗೆ) | ಜನವರಿ-11 | ಫೆಬ್ರವರಿ-11 |
| 1. | ವಿದ್ಯುಚ್ಛಕ್ತಿ ತೆರಿಗೆ(ಡಿಸೆಂಬರ್-10 ಅಚಿತ್ಯದವರಗೆ) | 3,14,14,15,169 | | |
| 2. | ಪರಿವೀಕ್ಷಣಾ ಶುಲ್ಕ | 19,28,63,844 | | |
| 3 | ಸಿನಿಮಾ ಪರಿವೀಕ್ಷಣಾ ಶುಲ್ಕ | 17,99,085 | | |
| 4. | ಪರವಾನಗಿ ಮತ್ತು ರಹದಾರಿ ನವೀಕರಣ | 31,47,904 | 15,38,46,929* | 47,07,89,059* |
| 5. | ಲಿಫ್ಟ್ ಪರಿವೀಕ್ಷಣಾ ಶುಲ್ಕ | 58,39,110 | | |
| 6. | ಇತರೆ | 7,94,385 | | |
| 7. | ಪರೀಕ್ಷಾ ಶುಲ್ಕಾ | 1,225 | | |
| 7. | ಕಾಂಪೌಂಡ್ ಶುಲ್ಕ | 5,84,070 | | |
| | ಒಟ್ಟು | 3,34,64,44,792 | 15,38,46,929 | 47,07,89,059 |
| | **ಒಟ್ಟು** | **3,97,10,80,780** | | |

* ಮಹಾಲೇಖಪಾಲರ ರಾಜಸ್ವ ಪಟ್ಟಿಯೊಂದಿಗೆ ಜನವರಿ-11 ಮತ್ತು ಫೆಬ್ರವರಿ-11 ತಿಂಗಳ ಲೆಕ್ಕ ಹೊಂದಾಣಿಕೆ ಮಾಡಬೇಕಾಗಿರುವುದು

2045-00-103-0-01 ಲೆಕ್ಕ ಶೀರ್ಷಿಕೆಯಡಿಯಲ್ಲಿ 2010-11 ಸಾಲಿಗೆ ಆಯವ್ಯಯ ಅನುದಾನದಲ್ಲಿ ಒದಗಿಸಲಾದ ಮತ್ತು ಖರ್ಚಾದ ಮೊತ್ತದ ವಿವರ (ಲಕ್ಷ ರೂ. ಗಳಲ್ಲಿ)

2010-11

| ಶೀರ್ಷಿಕೆ | ವಿವರಗಳು | 2010-11ರ ಸಾಲಿಗೆ ಆಯವ್ಯಯದಲ್ಲಿ ಒದಗಿಸಲಾದ ಅನುದಾನ | ಹೆಚ್ಚುವರಿ ಅನುದಾನ / ಪುನರ್ವಿನಿಯೋಗ | ಒಟ್ಟು ಅನುದಾನ (ಪರಿಷ್ಕೃತ) 2010-11 ನೇ ಸಾಲಿಗೆ | 2010-11ನೇ ಸಾಲಿನಲ್ಲಿ 01-04-2010 ರಿಂದ 31-03-2011 ಆದ ಖರ್ಚು |
|---|---|---|---|---|---|
| 002- ವೇತನ ಅಧಿಕಾರಿಗಳು | | 69.92 | 9.97 | 79.89 | 152.18 |
| 003 - ವೇತನ ಸಿಬ್ಬಂಧಿ | | 198.95 | 12.75 | 211.70 | 202.88 |
| 004 - ಮಧ್ಯಂತರ ಪರಿಹಾರ | | -- | -- | -- | -- |
| 011 - ತುಟ್ಟಿಭತ್ಯೆ | | 134.43 | 8.04 | 142.47 | 187.89 |
| 014 - ಇತರೆ ಭತ್ಯೆ | | 48.19 | 1.76 | 49.95 | 59.68 |
| 015 - ಪೂರಕ ವೆಚ್ಚ | | 1.24 | -- | 1.24 | 0.93 |
| 020- ವೈದ್ಯಕೀಯ ಭತ್ಯೆ | | 0.75 | 0.06 | 0.81 | 0.74 |
| 021- ವೈದ್ಯಕೀಯ ಮರುಪಾವತಿ | | 4.00 | 3.35 | 7.35 | 1.52 |
| 041 - ಪ್ರಯಾಣ ಭತ್ಯೆ | | 12.77 | 4.50 | 17.27 | 12.88 |
| 051- ಸಾಮಾನ್ಯ ವೆಚ್ಚ | | 10.09 | 3.81 | 13.90 | 13.73 |
| 071 - ಕಟ್ಟಡ ವೆಚ್ಚ | | 52.50 | 18.49 | 70.99 | 64.58 |
| 195 - ಸಾರಿಗೆ ವೆಚ್ಚ | | 72.30 | 12.90 | 85.20 | 73.56 |
| ಒಟ್ಟು | | **605.14** | **75.63** | **680.77** | **770.53** |

2045-00-103-0-02 ಕ.ವಿ.ಪ್ರ.ಸ.ನಿ.ನಿ ಮತ್ತು ಇತರೆ ಲೈಸೆನ್ಸುದಾರರಿಗೆ ಪಾವತಿಸತಕ್ಕ ರಿಬೇಟ್

| | | | | | |
|---|---|---|---|---|---|
| 106 | ರಿಯಾಯಿತಿ | 432.64 | -- | 432.64 | -- |
| ಒಟ್ಟು | | 432.64 | -- | 432.64 | -- |
| ಒಟ್ಟು ಮೊತ್ತ | | **1037.78** | **75.63** | **1113.41** | **770.53** |

ಇಲಾಖೆಯ ಬೇಡಿಕೆ ಅನುಸಾರ ಆಯವ್ಯಯ ಅನುದಾನದಲ್ಲಿ ಅನುದಾನವನ್ನು ಬಿಡುಗಡೆಗೊಳಿಸದಿರುವುದರಿಂದ ಆರ್ಥಿಕ ವರ್ಷದ ಮಧ್ಯದಲ್ಲಿ ಕೆಲವೊಂದು ಶೀರ್ಷಿಕೆಗಳಿಗೆ ಆಯವ್ಯಯ ಅನುದಾನದ ಕೊರತೆ ಉಂಟಾಗುವುದರಿಂದ ಪೂರಕ ಅನುದಾನ / ಪುನರ್ವಿನಿಯೋಗದ ಮೂಲಕ ವೆಚ್ಚವನ್ನು ಭರಿಸುವುದಕ್ಕೆ ಪ್ರಸ್ತಾಪಿಸಬೇಕಾಗುತ್ತದೆ. ಆದ್ದರಿಂದ ಆಯವ್ಯಯ ಅಂದಾಜಿಗೆ ಪೂರಕವಾದ ಮೊತ್ತವನ್ನು ಆಯವ್ಯಯದಲ್ಲಿ ಬಿಡುಗಡೆಗೊಳಿಸಿದಲ್ಲಿ ಹೆಚ್ಚುವರಿ ಅನುದಾನಕ್ಕೆ ಬೇಡಿಕೆಯನ್ನು ಸಲ್ಲಿಸುವುದನ್ನು ತಪ್ಪಿಸಬಹುದು. ಇಲಾಖೆಯು ಒಂದು ಯೋಜನೇತರ ಇಲಾಖೆಯಾಗಿದ್ದು ಯೋಜನೆಗೆ ಸಂಬಂಧಿಸಿದಂತೆ ಯಾವುದೇ ವೆಚ್ಚ ಅಥವಾ ಅನುದಾನ ಬಿಡುಗಡೆಯಾಗಿರುವುದಿಲ್ಲ. ಇಲಾಖೆಗೆ ನೀಡಲಾಗುವ ಆಯವ್ಯಯ ಅನುದಾನವನ್ನು ಸಿಬ್ಬಂಧಿಗಳ ಸಂಬಳ ಸಾರಿಗೆ ಮತ್ತು ಇತರ ಸಾದಿಲ್ವಾರು ವೆಚ್ಚಗಳಿಗಾಗಿ ಮಾತ್ರ ವ್ಯಯಿಸಲಾಗುತ್ತದೆ.

11/3/14

ಮುಖ್ಯ ವಿದ್ಯುತ್ ಪರಿವೀಕ್ಷಕರು